ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 24 ನೇ ಮಾರ್ಚ್, 2020

ತುಮಕೂರಿನ ಸುತ್ತ ಹೊರ ವರ್ತುಲ ರಸ್ತೆ ನಿರ್ಮಾಣ ಕುರಿತು

ಶ್ರೀ ಕಾಂತರಾಜ್ (ಬಿ.ಎಂ.ಎಲ್.)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

227 (1806) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ತುಮಕೂರು ನಗರದ 15-20 ಕಿ.ಮೀ. ದೂರದಲ್ಲಿ ಹೆಲಿಕಾಪ್ಟರ್ ಕಾರ್ಖಾನೆ/ಫುಡ್‌ಪಾರ್ಕ್/ಇಸ್ರೋ ಸಂಸ್ಥೆ/ಏಷ್ಯಾ ಖಂಡದಲ್ಲಿಯೇ ಪ್ರಥಮವಾಗಿರುವ ಕೈಗಾರಿಕಾ ಪ್ರದೇಶ/ಬಾಂಬೆ-ಬೆಂಗಳೂರು-ಚೆನ್ನೈ ಇಂಡಸ್ಟ್ರೀಯಲ್ ಕಾರಿಡಾರ್ ಹೀಗೆ ಇನ್ನು ಹತ್ತು ಹಲವಾರು ತುಮಕೂರು ಸುತ್ತ-ಮುತ್ತಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ತುಮಕೂರು ಮಹಾನಗರವು ದಿನೇ ದಿನೇ ವಿಸ್ತಾರವಾಗಿ ಬೆಳೆಯುತ್ತಿರುವುದರಿಂದ ಬೆಂಗಳೂರಿನ ಬಿ.ಡಿ.ಎ. ಮಾದರಿಯಲ್ಲಿ ಹೊರ ವರ್ತೂಲ ರಸ್ತೆಯನ್ನು ನಿರ್ಮಿಸಲಾಗುವುದೇ ;

(ಇ) ತುಮಕೂರು ಮಹಾನಗರದೊಳಗೆ ರಾಷ್ಟ್ರೀಯ ಹೆದ್ದಾರಿ ವಾಹನಗಳು ಸಂಚರಿಸುತ್ತಿರುವ ಕಾರಣ, ದಟ್ಟಣೆ ಹೆಚ್ಚಿರುವುದರಿಂದ ನಗರದ ಹೊರ ಭಾಗದಲ್ಲಿ ದಾಬಸ್‌ಪೇಟೆ-ಕೊರಟಗೆರೆ-ಶಿರಾ-ಗುಬ್ಬಿ-ಕುಣಿಗಲ್ ಮತ್ತು ದಾಬಸ್‌ಪೇಟೆ ಮಾರ್ಗದಲ್ಲಿ ಮುಂದಿನ 10-15 ವರ್ಷಗಳ ಭವಿಷ್ಯದ ಹಿತದೃಷ್ಟಿಯಿಂದ ರಿಂಗ್ ರಸ್ತೆ (ಫೆರಿಫರಲ್ ರಸ್ತೆ) ನಿರ್ಮಿಸಲು ಸರ್ಕಾರಕ್ಕಿರುವ ತೊಂದರೆ ಏನು ; ಈ ಫೆರಿಫರಲ್ ರಸ್ತೆ ನಿರ್ಮಿಸುವ ಯೋಜನೆಯನ್ನು ಸರ್ಕಾರ ಕಾರ್ಯಗತಗೊಳಿಸುವುದು ಯಾವಾಗ ?